# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.134/2014/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 1.9.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೊಡ್ಡಬಳ್ಳಾಪುರ ನಗರದ ವೀರಭದ್ರನ ಪಾಳ್ಯ ಗ್ರಾಮದ ಸರ್ವೆ ನಂ.6,11,14,25,26 ಮತ್ತು 29 ಇವುಗಳಲ್ಲಿ ಖಾಸಗಿ ವ್ಯಕ್ತಿಗಳು ಖಾಯಮಾತಿಗಾಗಿ 94 ಸಿಸಿ ಅಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ನಿಯಮಾನುಸಾರ ವಿಲೇವಾರಿ ಮಾಡಿದ ನಂತರ ಯಾರಾದರೂ ಈ ಮೇಲ್ಕಾಣಿಸಿದ ಜಮೀನುಗಳನ್ನು ಕಾನೂನು ಬಾಹಿರವಾಗಿ ಅತಿಕ್ರಮಿಸಿಕೊಂಡಿದ್ದರೆ ಅದನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ. ಡಿ.ಜಿ.ರಂಗನಾಥ, ಸಂಜಯನಗರ, ದೊಡ್ಡಬಳ್ಳಾಪುರದ ನಿವಾಸಿ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಸಹಾಯಕ ಆಯುಕ್ತರು ಮತ್ತು ತಹಶೀಲ್ದಾರ್, ದೊಡ್ಡಬಳ್ಳಾಪುರ ಮತ್ತು ಆಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, (ಇನ್ನು ಮುಂದೆ ಕ್ರಮವಾಗಿ " 1 ರಿಂದ 3ನೇ ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ಈ ಮೊದಲು ಬಿಡಿ.482/2010 ಮತ್ತು ಬಿಡಿ.2246/2013 ಎಂಬ ಎರಡು ದೂರುಗಳನ್ನು ದಾಖಲಿಸಿದ್ದು, ಅವುಗಳಲ್ಲಿ ದಿ.2.11.2013ರಂದು ನಡೆಸಿದ ಕ್ಯಾಂಪಿನಲ್ಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು ಅವರಿಗೆ ಅತಿಕ್ರಮಿಸಿಕೊಂಡ ಸರ್ಕಾರಿ ಜಮೀನನ್ನು ಒಂದು ತಿಂಗಳೊಳಗಾಗಿ

ಒತ್ತುವರಿದಾರರಿಂದ ಸ್ವಾಧೀನಪಡಿಸಿಕೊಂಡು ಖಾತೆ ಬದಲಾವಣೆ ಮಾಡಿ 6 ವಾರಗಳೊಳಗಾಗಿ ವರದಿ ನೀಡುವಂತೆ ಸ್ಥಳದಲ್ಲಿ ನಿರ್ದೇಶನ ನೀಡಿಲಾಗಿತ್ತು.

3. ಆದರೆ, ಆಗಿನ ತಹಶೀಲ್ದಾರ್, ದೊಡ್ಡಬಳ್ಳಾಪುರ ಅವರು ಸದರಿ ಆದೇಶದ ಪ್ರಕಾರ ಕ್ರಮ ಜರುಗಿಸಿದ ವರದಿ ಸಲ್ಲಿಸದ ಕಾರಣ ದೂರುದಾರರು ಈ ಪ್ರಕರಣವನ್ನು ದಾಖಲಿಸಿದ್ದು, 2ನೇ ಎದುರುದಾರರ ವಿರುದ್ದ ಸೂಕ್ತ ಕ್ರಮ ಜರುಗಿಸಿ ಸರ್ಕಾರಿ ಜಮೀನನ್ನು ಪುನ: ಸರ್ಕಾರದ ಸ್ವಾಧೀನಕ್ಕೆ ಪಡೆದುಕೊಳ್ಳಲು ಆದೇಶ ನೀಡಬೇಕೆಂದು ಕೋರಿರುತ್ತಾರೆ.

4. 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿ.2.9.2013ರಂದು ತನಗೆ ವರ್ಗಾವಣೆಯಾಗಿದ್ದರಿಂದ ದಿ.2.12.2013ರಂದು ನಡೆಸಿದ ಕ್ಯಾಂಪಿನ ಬಗ್ಗೆ ತನಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದಿಂದ ತನ್ನನ್ನು ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

5. 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಆದೇಶದ ಮೇರೆಗೆ ಅನಧಿಕೃತ ಕಟ್ಟಡ ನಿರ್ಮಿಸಿರುವವರ ಪಟ್ಟಿಯನ್ನು ತಯಾರಿಸಿ ದಿ. 11.3.2014ರಂದು ಕಛೇರಿಗೆ ವರದಿ ಸಲ್ಲಿಸಲಾಗಿದ್ದು ಅದರ ಇನ್ನೊಂದು ಪ್ರತಿಯನ್ನು ಪುನ: ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ.

6. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರುಚ್ಚರಿಸಿದ್ದಾರೆ.

7. ದೂರುದಾರರು ಹಾಜರುಪಡಿಸಿದ ದೂರು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, 2ನೇ ಎದುರುದಾರರು ದಿ.10.3.2014ರಂದು ಈ ಕಛೇರಿಗೆ ಸಲ್ಲಿಸಿದ ಪತ್ರದಲ್ಲಿ ದೊಡ್ಡಬಳ್ಳಾಪುರ ಪಟ್ಟಣದ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಮೀನಿನಲ್ಲಿ ಕೆಲವರು ಅನಧಿಕೃತವಾಗಿ ವೀರಭದ್ರನ ಪಾಳ್ಯದ ಸರ್ವೆ ನಂ.6, 11, 14, 25, 26, ಮತ್ತು 29ರಲ್ಲಿ ಕಟ್ಟಡಗಳನ್ನು ನಿರ್ಮಿಸಿರುತ್ತಾರೆ. ಆ ಅನಧಿಕೃತ ಕಟ್ಟಡಗಳನ್ನು ನಿರ್ಮಿಸಿದವರ ಒಟ್ಟು ಸಂಖ್ಯೆ 507 ಇದ್ದು, ಅವರ ಪಟ್ಟಿಯನ್ನು ಲಗತ್ತಿಸಿರುತ್ತಾರೆ.

8. ದಿ.19.5.2017ರಂದು ತಹಶೀಲ್ದಾರ್, ದೊಡ್ಡಬಳ್ಳಾಪುರ ಅವರು ಸರ್ವೆ ನಂ.6, 11,14,25,26 ಮತ್ತು 29ರ ಬಗ್ಗೆ ವರದಿಯನ್ನು ಸಲ್ಲಿಸಿರುತ್ತಾರೆ. ಅದರಲ್ಲಿ ಸರ್ವೆ ನಂ.6 ಕ್ಷೇತ್ರ 9 ಗುಂಟೆ ಸರ್ಕಾರಿ ಧರ್ಮದ ತೋಪಾಗಿದ್ದು, ಆ ಪೈಕಿ 6 ಗುಂಟೆ ಮೀನುಗಾರಿಕಾ ಇಲಾಖೆಗೆ ಮಂಜೂರಾಗಿರುತ್ತದೆ. ಸರ್ವೆ ನಂ.11 ಕ್ಷೇತ್ರ 39 ಗುಂಟೆ ಸರ್ಕಾರಿ ಧರ್ಮದ ತೋಪು ಎಂಬುದಾಗಿ ದಾಖಲಾಗಿದ್ದು, ಆದರೆ ಅಲ್ಲಿ ಮನೆಗಳು ನಿರ್ಮಾಣಗೊಂಡು ಬಡಾವಣೆಯಾಗಿರುತ್ತದೆ. ಇದೇ ಸರ್ವೆ ನಂಬರಿನಲ್ಲಿ ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ಕಲಂ.94(ಸಿಸಿ)ಅಡಿಯಲ್ಲಿ ಒಟ್ಟು 37 ಅರ್ಜಿಗಳು ವಿಲೇವಾರಿಗಾಗಿ ಬಾಕಿ ಉಳಿದಿರುತ್ತವೆ. ಸರ್ವೆ ನಂ.14 ಕ್ಷೇತ್ರ 6.31 ಎಕರೆ ಸರ್ಕಾರಿ ಗೋಮಾಳ ಜಮೀನಾಗಿದ್ದು, ಹಲವು ವರ್ಷಗಳಿಂದ ನಿವೇಶನ ರಹಿತರು, ಕೂಲಿ ಕಾರ್ಮಿಕರು, ಯೋಜನಾ ನಿರಾಶ್ರಿತರು ಮನೆ ನಿರ್ಮಾಣ ಮಾಡಿಕೊಂಡು ಸಂಜಯನಗರ ಬಡಾವಣೆ ನಿರ್ಮಾಣ ಮಾಡಿರುತ್ತಾರೆ. ಈ ಸರ್ವೆ ನಂಬರಿಗೆ 94 ಸಿಸಿ ಅಡಿಯಲ್ಲಿ 400 ಅರ್ಜಿಗಳು ವಿಲೇವಾರಿಗಾಗಿ ಬಾಕಿ ಇರುತ್ತವೆ. ಸರ್ವೆ ನಂ.26 ಕ್ಷೇತ್ರ 19 ಗುಂಟೆ ಜಮೀನು ಸರ್ಕಾರಿ ತೋಪು ಆಗಿದ್ದು ಇದರಲ್ಲಿ 8 ಗುಂಟೆ ಮೀನುಗಾರಿಕಾ ಇಲಾಖೆಗೆ ಮಂಜೂರಾಗಿರುತ್ತದೆ. ಸರ್ವೆ ನಂ.29ರಲ್ಲಿ 21 ಗುಂಟೆ ಸರ್ಕಾರಿ ಸ್ಮಷಾನ ಜಮೀನಾಗಿದ್ದು, ಇದನ್ನು ಒತ್ತುವರಿ ತೆರವುಗೊಳಿಸಿ ಖುಲ್ಲಾಪಡಿಸಲಾಗಿರುತ್ತದೆ. ಸರ್ವೆ ನಂ.25ರಲ್ಲಿ ಕ್ಷೇತ್ರ 3.12 ಎಕರೆ ಜಮೀನಿನ ಪೈಕಿ ಜಿಲ್ಲಾಧಿಕಾರಿಗಳು ವಾಲ್ಮೀಕಿ ಭವನಕ್ಕೆ 1 ಎಕರೆ, ದೇವರಾಜ ಅರಸು ಭವನಕ್ಕೆ 1 ಎಕರೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ 1 ಎಕರೆ, ಸರ್ಕಾರಿ ಪ್ರೌಢಶಾಲೆಯ ಆಟದ ಮೈದಾನಕ್ಕೆ 1 ಎಕರೆ, ಸಮಾಜ ಕಲ್ಯಾಣ ಇಲಾಖೆಯ ಬಾಲಕರ ವಿದ್ಯಾರ್ಥಿ ನಿಲಯಕ್ಕೆ 12 ಗುಂಟೆ ಮಂಜೂರು ಮಾಡಿರುತ್ತಾರೆ. ಇದರಲ್ಲಿ 94 ಸಿಸಿ ಅಡಿಯಲ್ಲಿ 2 ಅರ್ಜಿಗಳು ಬಾಕಿ ಇರುತ್ತವೆ. 94 ಸಿಸಿ ಅರ್ಜಿಗಳನ್ನು ಸರ್ಕಾರದ ಹೊಸ ನಿಯಮದಂತೆ ವಿಲೇವಾರಿಗಾಗಿ ಅಗತ್ಯ ಕ್ರಮಕೈಗೊಳ್ಳಲಾಗುವುದೆಂದು ವರದಿಯಲ್ಲಿ ತಿಳಿಸಿರುತ್ತಾರೆ.

9. ತಹಶೀಲ್ದಾರ್, ದೊಡ್ಡಬಳ್ಳಾಪುರ ಅವರ ವರದಿ ಹಾಗೂ ಇತರ ದಾಖಲೆಗಳನ್ನು ಪರಿಶೀಲಿಸಲಾಗಿ, ಮೇಲ್ಕಂಡ ಸರ್ವೆ ನಂಬರುಗಳಲ್ಲಿ ಸರ್ಕಾರಿ ಕಟ್ಟಡಗಳಿಗೆ ಕೆಲವು ಜಮೀನು ಮಂಜೂರಾಗಿದ್ದು, ಇನ್ನೂ ಕೆಲವು ಸರ್ವೆ ನಂಬರುಗಳಲ್ಲಿ ಖಾಸಗಿ ವ್ಯಕ್ತಿಗಳು ಮನೆ ಕಟ್ಟಿಕೊಂಡು ಬಡಾವಣೆ ನಿರ್ಮಾಣಮಾಡಿರುವುದು ಕಂಡುಬರುತ್ತದೆ. ಈ ಎಲ್ಲ ಖಾಸಗಿ ವ್ಯಕ್ತಿಗಳು ಮಂಜೂರಾತಿ ಕೋರಿ

ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ಕಲಂ 94 ಸಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಅವು ವಿಲೇವಾರಿಗಾಗಿ ಬಾಕಿ ಇರುವುದು ಕಂಡುಬರುತ್ತದೆ.

10. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೊಡ್ಡಬಳ್ಳಾಪುರ ನಗರದ ವೀರಭದ್ರನ ಪಾಳ್ಯ ಗ್ರಾಮದ ಸರ್ವೆ ನಂ.6,11,14,25,26 ಮತ್ತು 29 ಇವುಗಳಲ್ಲಿ ಖಾಸಗಿ ವ್ಯಕ್ತಿಗಳು ಅಕ್ರಮವಾಗಿ ಮನೆ ನಿರ್ಮಿಸಿಕೊಂಡಿದ್ದು, ಅವುಗಳ ಖಾಯಮಾತಿಗಾಗಿ 94 ಸಿಸಿ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಅವುಗಳನ್ನು ನಿಯಮಾನುಸಾರ ಶೀಘ್ರವಾಗಿ ವಿಲೇವಾರಿ ಮಾಡಿದ ನಂತರ ಯಾರಾದರೂ ಈ ಮೇಲ್ಕಾಣಿಸಿದ ಜಮೀನುಗಳನ್ನು ಕಾನೂನು ಬಾಹಿರವಾಗಿ ಅತಿಕ್ರಮಿಸಿಕೊಂಡಿದ್ದರೆ ಅದನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

1/9/17.

**(ನ್ಯಾಯಮೂರ್ತಿ ಸುಬಾಷ್ ಬಿ ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**